





# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ದುರ್ಗಾಪೂಜೆ: ಬೇಲೂರು ಮಠದಲ್ಲಿ** ಈ ವರ್ಷ ಅಕ್ಟೋಬರ್ ೧೨ ರಿಂದ ೧೫ರ ವರೆಗೆ ದುರ್ಗಾಪೂಜೆಯು ವಿಜೃಂಭಣೆಯಿಂದ ನಡೆಯಿತು. ಕಳೆದ ವರ್ಷದಂತೆ ಈ ವರ್ಷವೂ ಶ್ರೀರಾಮಕೃಷ್ಣ ಮಂದಿರದಲ್ಲೇ ದುರ್ಗಾಪೂಜೆ ನಡೆಯಿತು. ಕೋವಿಡ್-೧೯ ನಿಮಿತ್ತ ಈ ಸಂದರ್ಭದಲ್ಲಿ ಸಾರ್ವಜನಿಕರ ಭೇಟಿಯನ್ನು ರದ್ದುಗೊಳಿಸಲಾಗಿತ್ತು. ದುರ್ಗಾಪೂಜೆಯನ್ನು ದೂರದರ್ಶನ ಹಾಗೂ ಬೇಲೂರು ಮಠದ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಗಿದ್ದು, ಸಹಸ್ರಾರು ಮಂದಿ ಅದನ್ನು ವೀಕ್ಷಿಸಿದರು.

೨೮ ಶಾಖಾಕೇಂದ್ರಗಳಲ್ಲಿ ಮೂರ್ತಿಯೊಂದಿಗೆ ದುರ್ಗಾಪೂಜೆಯನ್ನು ನೆರವೇರಿಸಲಾಯಿತು.

**ಗುವಾಹಟಿ** ಕೇಂದ್ರದಲ್ಲಿ ಅಕ್ಟೋಬರ್ ೬ ರಂದು ಸ್ವಾಮಿ ಅಖಂಡಾನಂದರ ಜಯಂತಿಯ ಸಂದರ್ಭದಲ್ಲಿ ಎರಡು ಮಹಡಿಯ ಬಹೂಪಯೋಗಿ ಕಟ್ಟಡವನ್ನು ಉದ್ಘಾಟಿಸಲಾಯಿತು.

**ಖೇತ್ರಿ** ಆಶ್ರಮವು ಶ್ರೀಮಾತೆ ಶಾರದಾದೇವಿಯವರು ಭೇಟಿ ನೀಡಿದ್ದರ ಸ್ಮರಣಾರ್ಥವಾಗಿ ರಾಜಸ್ಥಾನದ ಪುಷ್ಕರದಲ್ಲಿರುವ ಬೆಟ್ಟದ ಮೇಲಿನ ಸಾವಿತ್ರೀ ಮಂದಿರದಲ್ಲಿ ಶ್ರೀಮಾತೆ ಶಾರದಾದೇವಿಯವರ ಸಣ್ಣ ದೇವಾಲಯವನ್ನು ನಿರ್ಮಿಸಿದ್ದು, ಅಕ್ಟೋಬರ್ ೮ರಂದು ಅದನ್ನು ಉದ್ಘಾಟಿಸಲಾಯಿತು.

ಬೇಲೂರಿನಲ್ಲಿರುವ **ಶಾರದಾಪೀಠ**ದ ಅಂಗಸಂಸ್ಥೆಯಾದ ಶಿಲ್ಪ ವಿದ್ಯಾಲಯವು (ITI) ಅಕ್ಟೋಬರ್ ೯ರಂದು ತನ್ನ ಶತಮಾನೋತ್ಸವವನ್ನು ಉದ್ಘಾಟಿಸುವುದರ ನಿಮಿತ್ತ ಆನ್‌ಲೈನ್ ಕಾರ್ಯಕ್ರಮವನ್ನು ನಡೆಸಿತು. ಈ ಸಂದರ್ಭದಲ್ಲಿ ಸ್ವಾಮಿ ಗೌತಮಾನಂದಜಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಭಾಷಣ ಮಾಡಿದರು.

**ಅಸನ್ಸೋಲ್** ಆಶ್ರಮವು ಅಕ್ಟೋಬರ್ ೨೬ರಂದು ತನ್ನ ಐ.ಟಿ.ಐ. ಆವರಣದಲ್ಲಿ **'ವಿಜಿಲೆನ್ಸ್ ಅವೇರ್‌ನೆಸ್ ವೀಕ್ - ೨೦೨೧'** ಕಾರ್ಯ ಕ್ರಮವನ್ನು ನಡೆಸಿತು.

**ವೃಂದಾವನ** ಕೇಂದ್ರದ ಆಸ್ಪತ್ರೆಯ NICUಅನ್ನು ಅಕ್ಟೋಬರ್ ೨೦ರಂದು ವಿಶಾಲವಾದ ಹೊಸ ಪ್ರದೇಶಕ್ಕೆ ವರ್ಗಾಯಿಸಲಾಯಿತು.

ವಿವೇಕಾನಂದ ವಿಶ್ವವಿದ್ಯಾಲಯ (RKMVERI deemed university)ವು ತನ್ನ ೧೬ನೇ ಘಟಿಕೋತ್ಸವವನ್ನು ಅಕ್ಟೋಬರ್ ೨೦ರಂದು ತನ್ನ ಸುದೂರ ಕೇಂದ್ರವಾಗಿರುವ ಕೊಯಮತ್ತೂರು ಮಿಷನ್ ವಿದ್ಯಾಲಯದಲ್ಲಿ ನಡೆಸಿತು. ಸುಮಾರು ೨೨೧ ವಿದ್ಯಾರ್ಥಿಗಳು ವಿವಿಧ ಪದವಿಗಳನ್ನು ಹಾಗೂ ಪ್ರಮಾಣಪತ್ರಗಳನ್ನು ಪಡೆದರು.

**ಚೆನ್ನೈ ಮಿಷನ್ ಆಶ್ರಮ**ದ ಹೈಯರ್ ಸೆಕೆಂಡರಿ ಸ್ಕೂಲ್ (ದಕ್ಷಿಣ) ನಲ್ಲಿ ಹೊಸದಾಗಿ ನಿರ್ಮಿಸಲ್ಪಟ್ಟ ಎರಡನೇ ಮಹಡಿಯ ತರಗತಿಗಳನ್ನು ಅಕ್ಟೋಬರ್ ೨೦ರಂದು ಉದ್ಘಾಟಿಸಲಾಯಿತು. ಸ್ವಾಮಿ ಗೌತಮಾನಂದಜಿಯವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

**ಚೆನ್ನೈ ಮಠ**ದ ಬಾಲಕಿಯರ ಹೈಯರ್ ಸೆಕೆಂಡರಿ ಸ್ಕೂಲ್‌ನ ಹೊಸ ವಿಸ್ತರಣೆಯನ್ನು ಸ್ವಾಮಿ ಗೌತಮಾನಂದಜಿಯವರು ಅಕ್ಟೋಬರ್ ೨೭ರಂದು ಉದ್ಘಾಟಿಸಿದರು.

**ಕೋಝಿಕ್ಕೋಡ್** ಆಶ್ರಮವು ನಡೆಸುತ್ತಿರುವ ಶಾಲೆಯ ೬ನೇ ತರಗತಿಯ ವಿದ್ಯಾರ್ಥಿಯೊಬ್ಬನು ISROದ ತಿರುವನಂತಪುರ ಕೇಂದ್ರವು ನಡಸಿದ ಚಿತ್ರಕಲಾಸ್ಪರ್ಧೆಯಲ್ಲಿ ತೃತೀಯ ಬಹುಮಾನವನ್ನು ಪಡೆದಿದ್ದಾನೆ. ಅದೇ ಶಾಲೆಯ ೧೨ನೆಯ ತರಗತಿಯ ವಿದ್ಯಾರ್ಥಿಯೊಬ್ಬನು ಲಂಡನ್ನಿನ ರಾಯಲ್ ಕಾಮನ್‌ವೆಲ್ತ್ ಸೊಸೈಟಿಯು ನಡೆಸಿದ ಕ್ವೀನ್ಸ್ ಕಾಮನ್‌ವೆಲ್ತ್ ಪ್ರಬಂಧ ಸ್ಪರ್ಧೆಯಲ್ಲಿ ಚಿನ್ನದ ಪ್ರಶಸ್ತಿಯನ್ನು ಗಳಿಸಿದ್ದಾನೆ.







Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020